# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಭಾರತದ ಶಕ್ತಿ : "ಭಾರತ ಮೊದಲು" ಎಂಬ ಇಂತಹ ದೇಶಪ್ರೇಮಿಗಳು


ಸಂಪುಟ : 38 ಸಂಚಿಕೆ : 9 ದುರ್ಮುಖಿ–ಮಾರ್ಗಶಿರ ಕಲಿಯುಗಾಬ್ದ 5118 15–12–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಬಂದಿದೆ ಯುಪಿಐ: ಕರೆನ್ಸಿ ನೋಟು ಬೇಕಿಲ್ಲ, ಮೊಬೈಲೇ ಎಲ್ಲ!


ಇನ್ನೊಬ್ಬರಿಗೆ ಹಣ ಕೊಡುವ ಅಥವಾ ಅವರಿಂದ ಪಡೆಯುವ ಸಂದರ್ಭಗಳಲ್ಲಿ ನಗದು ರೂಪದಲ್ಲಿ ವ್ಯವಹರಿಸುತ್ತಿದ್ದುದು ಬಹಳ ವರ್ಷಗಳಿಂದ ನಡೆದು ಬಂದ ವಿಧಾನ. ತಂತ್ರಜ್ಞಾನ ಬೆಳೆದಂತೆ ಹಲವು ಹೊಸ ರೀತಿಯ ಹಲವು ಕ್ರಮಗಳು ಚಾಲ್ತಿಗೆ ಬಂದರೂ ಬಹುತೇಕ ಜನರು ಇನ್ನೂ ಅವಲಂಬಿಸಿರುವುದು ನೋಟುಗಳನ್ನೇ. ನಗದು ರಹಿತ ವ್ಯವಹಾರಕ್ಕಿರುವ ಕೆಲವು ವಿಧಾನಗಳು ಹೀಗಿವೆ:

- ಚೆಕ್/ಡಿಡಿ ಆಧಾರಿತ ವರ್ಗಾವಣೆ (ಎಲ್ಲ ಬ್ಯಾಂಕುಗಳಲ್ಲೂ ಅವಕಾಶವಿರುತ್ತದೆ.)
- ಕ್ರೆಡಿಟ್ ಮತ್ತು ಡೆಬಿಟ್/ಎಟಿಎಂ ಕಾರ್ಡ್
- ಇ–ಕೈಚೀಲಗಳು ಅಥವಾ ವಾಲೆಟ್‌ಗಳು (ಪೇಟಿಎಂ, ಫ್ರೀಚಾರ್ಜ್, ಮೊಬಿಕ್ವಿಕ್, ಎಸ್‌ಬಿಐ ಬಡ್ಡೀ, ಏರ್‌ಟೆಲ್ ಮನಿ, ಜಿಯೋ ಮನಿ, ಐಸಿಐಸಿಐ ಪಾಕೆಟ್ ಇತ್ಯಾದಿ)
- ಯುಪಿಐ (ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್): ಸರಕಾರ ರೂಪಿಸಿರುವ ಹೊಸ ಪಾವತಿ ವ್ಯವಸ್ಥೆ. ಸರಳ ಮತ್ತು ಸುರಕ್ಷಿತ.
- ಎನ್‌ಇಎಫ್‌ಟಿ, ಐಎಂಪಿಎಸ್, ಆರ್‌ಟಿಜಿಎಸ್: ಇದುವರೆಗೆ ಲಭ್ಯವಿದ್ದ ಆನ್‌ಲೈನ್ ಪಾವತಿ ವ್ಯವಸ್ಥೆಗಳು. ಕೋರ್ ಬ್ಯಾಂಕಿಂಗ್ ಪದ್ಧತಿಯ ಎಲ್ಲ ಬ್ಯಾಂಕುಗಳಲ್ಲಿ ಲಭ್ಯವಿರುತ್ತದೆ.

ನಗದು ಪಾವತಿಗಳು ಸಣ್ಣ ವ್ಯವಹಾರಗಳಿಗೆ ಅನುಕೂಲಕರ ಹೌದು. ಆದರೆ ದೊಡ್ಡ ವ್ಯವಹಾರಗಳನ್ನು ನಗದು ರೂಪದಲ್ಲೇ ಮಾಡುವುದರಿಂದ ಹಲವಾರು ತೊಂದರೆಗಳಿವೆ. ತೆರಿಗೆ ಇಲಾಖೆಗಳ ಕಣ್ಣು ತಪ್ಪಿಸಲು ಸಾಮಾನ್ಯವಾಗಿ ನಗದನ್ನು ಬಳಸಲಾಗುತ್ತದೆ. ಇದುವೇ ಈಗಿನ ಕಪ್ಪು ಹಣ ಸಮಸ್ಯೆಗೆ ಕಾರಣವಾಗಿರುವುದು. ನಗದು ನಿಮ್ಮಲ್ಲಿರಬೇಕು, ಸರಿಯಾದ ಚಿಲ್ಲರೆ ಇರಬೇಕು. ಹರಕು, ಹೊಲಸು, ನಕಲಿ ನೋಟು ಇರಕೂಡದು. ಅಲ್ಲದೇ ಕಳ್ಳತನ, ದರೋಡೆ, ಕಳೆದುಕೊಳ್ಳುವ ಸಾಧ್ಯತೆ ಬೇರೆ. ನಮ್ಮಲ್ಲೇ ಶೇಖರಿಸಿಟ್ಟಿರುವ ನಗದು ಹಣ ಬಳಸುವವರೆಗೆ ಅದು ಬೇರೆಯವರಿಗೆ ಸಹಾಯಕ್ಕೆ ಬರುವುದಿಲ್ಲ. ಆದರೆ ಬ್ಯಾಂಕಿನಲ್ಲಿದ್ದರೆ ಇತರರಿಗೆ ಸಾಲದ ಮೂಲಕ ಕೊಡಲ್ಪಟ್ಟು ಹಣದ ನಿರಂತರ ಚಲಾವಣೆ ಸಾಧ್ಯವಾಗುತ್ತದೆ. ಸಧೃಡ ಹಣಕಾಸು ವ್ಯವಸ್ಥೆ ಇದರಿಂದ ಸಾಧ್ಯವಾಗುತ್ತದೆ ಮತ್ತು ದೇಶ ಬಲಿಷ್ಠವಾಗುತ್ತದೆ.

## ಏನಿದು ಯುಪಿಐ? ಇದರಿಂದ ಏನು ಅನುಕೂಲ?

ಡಿಜಿಟಲ್ ವಿಧಾನದಲ್ಲಿರುವ ಕೊರತೆಗಳನ್ನು ನೀಗಿಸಿ, ಸಾಮಾನ್ಯರೂ ಬಳಸುವಂತೆ ಮಾಡಲು ಈಗ ಜಾರಿಗೆ ಬಂದಿರುವ ವ್ಯವಸ್ಥೆಯೇ ಯುಪಿಐ. ಅಂದರೆ ಯೂನಿಫೈಡ್ ಪೇಮೆಂಟ್




| ಚೆಕ್/ಡಿಡಿಯ ಹೊರತಾಗಿ ಉಳಿದವೆಲ್ಲವೂ ಡಿಜಿಟಲ್ ಆಧಾರಿತ ವ್ಯವಸ್ಥೆಗಳೇ. ಡಿಜಿಟಲ್ ಪಾವತಿ ವಿಧಾನಗಳ ಒಂದು ಹೋಲಿಕೆ ಇಲ್ಲಿದೆ. | | | | |
|---|---|---|---|---|
| | ಕ್ರೆಡಿಟ್‌ಕಾರ್ಡ್/ಡೆಬಿಟ್‌ಕಾರ್ಡ್ | ಮೊಬೈಲ್‌ವಾಲೆಟ್ | ಎನ್.ಇ.ಎಫ್.ಟಿ. | ಯುಪಿಐ |
| **ಸೇವೆ ಒದಗಿಸುತ್ತಿರುವವರು ಯಾರು?** | ಮಾಸ್ಟರ್ ಕಾರ್ಡ್, ವೀಸಾ, ಡಿಸ್ಕವರ್, ಅಮೆರಿಕನ್ ಎಕ್ಸ್‌ಪ್ರೆಸ್ ಇತ್ಯಾದಿಗಳು ವಿದೇಶೀ ಕಂಪೆನಿಗಳು. ರುಪೇ ಭಾರತದ್ದು | ಹಲವು ಖಾಸಗಿ ಕಂಪೆನಿಗಳಿವೆ. (ತುಂಬ ಬಳಕೆಯಲ್ಲಿರುವುದು ಪೇಟಿಎಂ. ಇದು ಚೈನಾದ ಬಂಡವಾಳ ಹೂಡಿರುವ ಕಂಪೆನಿ) | ಸರಕಾರದ ಯೋಜನೆ, ಬ್ಯಾಂಕುಗಳು ಅಳವಡಿಸಿಕೊಂಡಿವೆ | ಸರಕಾರದ ಯೋಜನೆ, ಬ್ಯಾಂಕುಗಳು ಅಳವಡಿಸಿಕೊಂಡಿವೆ |
| **ಏನು ಮಾಡಬಹುದು?** | ಮಳಿಗೆಗಳಲ್ಲಿ ಪಾವತಿ, ಆನ್–ಲೈನ್ ಶಾಪಿಂಗ್ | ಮಳಿಗೆಗಳಲ್ಲಿ, ಆನ್–ಲೈನ್ ಶಾಪಿಂಗ್, ಇತರರಿಗೆ ನೇರ ಹಣ ವರ್ಗಾವಣೆ | ಆನ್–ಲೈನ್ ಶಾಪಿಂಗ್, ಇತರರಿಗೆ ನೇರ ಹಣ ವರ್ಗಾವಣೆ | ಮಳಿಗೆಗಳಲ್ಲಿ, ಆನ್‌ಲೈನ್ ಶಾಪಿಂಗ್, ಇತರರ ಖಾತೆಗಳಿಗೆ ವರ್ಗಾವಣೆ, ಇತರರಿಂದ ಹಣ ಕಳುಹಿಸಲು ಮನವಿ |
| **ವೆಚ್ಚ** | ವ್ಯಾಪಾರಿಗಳಿಗೆ 0.75% ರಿಂದ 2% ವರೆಗೆ ಶುಲ್ಕ ಮತ್ತು ಕಾರ್ಡ್ ಉಜ್ಜುವ ಯಂತ್ರದ ಬಾಡಿಗೆ | ಖಾತೆಗೆ ವರ್ಗಾಯಿಸಲು 4% ವರೆಗೆ ಶುಲ್ಕ, ಈಗ 1%ಗೆ ಇಳಿಸಲಾಗಿದೆ. | ಬ್ಯಾಂಕುಗಳು 0.0 ರಿಂದ ರೂ.5 ರವರೆಗೆ ಶುಲ್ಕ ವಿಧಿಸುತ್ತಾರೆ. | ಈಗ ಯಾವುದೇ ಶುಲ್ಕವಿಲ್ಲ. 50 ಪೈಸೆ ವಿಧಿಸುವ ಯೋಜನೆಯಿದೆ. |
| **ಯಾರು ಬಳಸಬಹುದು?** | ಕಾರ್ಡ್ ಇದ್ದವರು | ಸ್ಮಾರ್ಟ್ ಫೋನ್, ಇಂಟರ್ನೆಟ್ ಇದ್ದವರು. | ಇಂಟರ್ನೆಟ್ ಇದ್ದವರು | ಸ್ಮಾರ್ಟ್ ಫೋನ್ ಇದ್ದವರು ಆಪ್ ಮೂಲಕ, ಇತರ ಮೊಬೈಲ್ ಇದ್ದವರು USSD ಮೂಲಕ |
| **ವರ್ಗಾವಣೆ ವಿಧಾನ** | ತಕ್ಷಣ ಪಾವತಿ | ಪೇಟಿಎಂ ಖಾತೆಗೆ ಮೊದಲೇ ಪಾವತಿಸಿರಬೇಕು, ದುಡ್ಡು ಪಡೆದವರ ಪೇಟಿಎಂ ಖಾತೆಗೆ ಸೇರುತ್ತದೆ. ಅಲ್ಲಿಂದ ಬ್ಯಾಂಕ್ ಖಾತೆಗೆ ವರ್ಗಾಯಿಸಿ ಕೊಳ್ಳಬೇಕು | ನೇರವಾಗಿ ಖಾತೆಯಿಂದ ಖಾತೆಗೆ, ಇಬ್ಬರ ಬ್ಯಾಂಕುಗಳೂ ಒಂದೇ ಅಲ್ಲವಾದಲ್ಲಿ ಕೆಲವು ಗಂಟೆಗಳ ಸಮಯ ಬೇಕು. | ನೇರವಾಗಿ ಖಾತೆಯಿಂದ ಖಾತೆಗೆ, ತಕ್ಷಣ ವರ್ಗಾವಣೆ |
| **ವರ್ಗಾಯಿಸುವವರಿಗೆ ಬೇಕಾದ ಮಾಹಿತಿ** | **ಕಾರ್ಡ್ ಮುಖಾಂತರ ಮಾಹಿತಿ ವರ್ಗಾವಣೆ** | **QR ಕೋಡ್ ಮೂಲಕ/ಮೊಬೈಲ್ ಸಂಖ್ಯೆ ಮೂಲಕ** | **ಬ್ಯಾಂಕ್ ಹೆಸರು, ಖಾತೆ ಸಂಖ್ಯೆ, IFSC code, ಹೆಸರು ಇತ್ಯಾದಿ** | **QR code / ಈಮೈಲ್ ಐಡಿ ರೀತಿಯ ವರ್ಚುವಲ್ ಪೇಮೆಂಟ್ ವಿಳಾಸ ಅಥವಾ ಆಧಾರ್ ಸಂಖ್ಯೆ** |
| **ಯಾರಿಗೆ ವರ್ಗಾವಣೆ?** | ವ್ಯಾಪಾರಿಗಳಲ್ಲಿರುವ POS ಯಂತ್ರದ ಮೇಲೆ ಆಧರಿತ – ವೀಸಾ, ಮಾಸ್ಟರ್ ಕಾರ್ಡ್ ಸಾಮಾನ್ಯವಾಗಿ ಎಲ್ಲೆಡೆ ಸ್ವೀಕರಿಸುತ್ತಾರೆ. | ಅವರಲ್ಲೂ ಅಂತಹುದೇ app ಬೇಕು | ಯಾವುದೇ ಬ್ಯಾಂಕ್ | ಯುಪಿಐ ಸೌಲಭ್ಯವುಳ್ಳ ಯಾವುದೇ ಬ್ಯಾಂಕ್ (ಸದ್ಯಕ್ಕೆ 31 ಬ್ಯಾಂಕ್‌ಗಳಿವೆ) |

ಇಂಟರ್ಫೇಸ್. ಏಕೀಕೃತ ಪಾವತಿ ವ್ಯವಸ್ಥೆ ಅಂತ ಕನ್ನಡದಲ್ಲಿ ಅರ್ಥ ಮಾಡಿಕೊಳ್ಳಬಹುದು. ಇಷ್ಟು ವ್ಯಾಪಕ ಪ್ರಮಾಣದಲ್ಲಿ ಹಣ ಪಾವತಿ ವ್ಯವಸ್ಥೆಯ ಪ್ರಯತ್ನವು ವಿಶ್ವದಲ್ಲಿ ಇದುವರೆಗೂ ಎಲ್ಲಿಯೂ ಕಾರ್ಯಗತಗೊಳಿಸಲಾಗಿಲ್ಲ ಎನ್ನುವುದು ಇದರ ಹೆಗ್ಗಳಿಕೆಯಾಗಿದೆ.

ನಿಮ್ಮ ಬಳಿ ಮೊಬೈಲ್ ಇದ್ದೇ ಇರುತ್ತದೆ. ಅದು ಸ್ಮಾರ್ಟ್ ಫೋನ್ ಆಗಿರುವ ಸಾಧ್ಯತೆಯೂ ಹೆಚ್ಚು. ಮತ್ತೆ ನಿಮಗೊಂದು ಬ್ಯಾಂಕ್ ಖಾತೆಯೂ ಇದೆ. ಆ ಬ್ಯಾಂಕಿನವರ ಹತ್ತಿರ ನಿಮ್ಮ ಮೊಬೈಲ್ ಸಂಖ್ಯೆಯೂ ಇದ್ದು, ಅದನ್ನು ನಿಮ್ಮ ಖಾತೆಗೆ ತಳುಕು ಹಾಕಲಾಗಿರುತ್ತದೆ. ಇನ್ನೂ ಆ ರೀತಿ ಲಿಂಕ್ ಆಗಿಲ್ಲವಾದಲ್ಲಿ ಬ್ಯಾಂಕಿಗೆ ಹೋಗಿ ಅದನ್ನು ಜೋಡಿಸುವಂತೆ ಅವರಿಗೆ ಹೇಳಿ.

- ಈಗ ನೀವು ನಿಮ್ಮ ಮೊಬೈಲಿಗೆ 'ಯಾವುದಾದರು ಬ್ಯಾಂಕಿನ' (ನಿಮ್ಮ ಖಾತೆ ಇರುವ ಬ್ಯಾಂಕಿನದ್ದೇ ಆಗಬೇಕೆಂದಿಲ್ಲ) ಯುಪಿಐ ಆ್ಯಪ್ ಹಾಕಿಕೊಳ್ಳಿ.
- ಯಾವುದೇ ಯುಪಿಐ ಆ್ಯಪ್‌ನಲ್ಲೂ ಮುಂದಿನ ಹೆಜ್ಜೆಗಳು ಹೆಚ್ಚೂ ಕಡಿಮೆ ಇವೇ ಇರುತ್ತವೆ. ನಿಮ್ಮ ಮೊಬೈಲ್ ನಂಬರ್ ಕೊಡಬೇಕು. ಈ ಯುಪಿಐ ಆ್ಯಪ್‌ಗೊಂದು ಎಂಪಿನ್ (ಮೊಬೈಲ್ ಪಿನ್) / ಪಾಸ್‌ವರ್ಡ್ ಇಟ್ಟುಕೊಳ್ಳಬೇಕು. (ಮುಂದೆ ಎಂದಾದರೂ ಪಾಸ್‌ವರ್ಡ್ ಮರೆತರೆ ಅದನ್ನು ಪಡೆಯಲು ರಹಸ್ಯ ಪ್ರಶ್ನೆ, ಅದಕ್ಕೆ ನಿಮ್ಮ ಉತ್ತರ ಇತ್ಯಾದಿ ಆಯ್ಕೆ ಇರಬಹುದು)
- ಈಗ ನಿಮ್ಮ ಖಾತೆಯ ವಿವರಗಳನ್ನು ಮತ್ತು ಅದಕ್ಕೊಂದು ನಿಮ್ಮ ಆಯ್ಕೆಯ ವರ್ಚುವಲ್ ಪೇಮೆಂಟ್ ಅಡ್ರೆಸ್ (ಉದಾಹರಣೆಗೆ ನಿಮ್ಮ ಹೆಸರು ರಮೇಶ ಆಗಿದ್ದು ನಿಮ್ಮ ಬ್ಯಾಂಕ್ ಎಸ್‌ಬಿಐ ಆಗಿದ್ದರೆ ಅದು ramesha@sbi ಆಗಿರಬಹುದು) ಪಡೆಯಬೇಕು. ಈ ವರ್ಚುವಲ್ ವಿಳಾಸ ನೀವು ಬಳಸುವ ಯುಪಿಐ ಆ್ಯಪ್ ಮೇಲೆ ಅವಲಂಬಿತವಾಗಿರುತ್ತದೆ. ಇದರ ಸುರಕ್ಷತೆಗಾಗಿ ನಿಮ್ಮ ಖಾತೆಗೆ ತಾನಾಗಿಯೇ ಒಂದು ಎಸ್ಸೆಮ್ಮೆಸ್ ಕಳುಹಿಸಿ ಧೃಡೀಕರಣವನ್ನೂ ಆ್ಯಪ್ ಮಾಡಿಕೊಳ್ಳುತ್ತದೆ. ಇದೇ ರೀತಿ ನಿಮ್ಮ ಇನ್ನಷ್ಟು ಬ್ಯಾಂಕ್ ಖಾತೆಗಳನ್ನು ಸೇರಿಸಬಹುದು.
- ಇದೇ ರೀತಿ ನಿಮ್ಮೊಂದಿಗೆ ವ್ಯವಹಾರ ಇಟ್ಟುಕೊಂಡವರು ಇಂತಹ ಯಾವುದೇ ಬ್ಯಾಂಕಿನ ಯುಪಿಐ ಆ್ಯಪ್ ಹಾಕಿಕೊಂಡು ವರ್ಚುವಲ್ ಪೇಮೆಂಟ್ ಅಡ್ರೆಸ್ ಮಾಡಿಕೊಂಡು ನಿಮಗೆ ಅದನ್ನು ತಿಳಿಸಿದರೆ ನೀವು ನಿಮ್ಮ ಆ್ಯಪ್ ಮೂಲಕ ಅವರ ಖಾತೆಗೆ ಹಣ ಜಮಾ ಮಾಡಬಹುದು. ಅವರು ತಮ್ಮ ಖಾತೆ ಯಾವ ಬ್ಯಾಂಕಿನ ಯಾವ ಶಾಖೆಯಲ್ಲಿ ಇದೆ, ಅದರ ಬ್ರ್ಯಾಂಚ್ ಕೋಡ್ ಏನು, ಐಎಫ್‌ಎಸ್‌ಸಿ ಸಂಖ್ಯೆ ಏನು, ಅಕೌಂಟ್ ನಂಬರ್ ಏನು, ಯಾವ ಹೆಸರಿನಲ್ಲಿ ಇದೆ ಇವೆಲ್ಲ ವಿವರಗಳನ್ನು ತಿಳಿಸುವ ಅಗತ್ಯವೇ ಇಲ್ಲ. ಅವರೂ ಕೂಡ ನಿಮ್ಮ ವರ್ಚುವಲ್ ಪೇಮೆಂಟ್ ಅಡ್ರೆಸ್ ಬಳಸಿ ನಿಮ್ಮ ಖಾತೆಗೆ ಹಣ ಜಮಾ ಮಾಡಬಹುದು.
- ಈ ವರ್ಗಾವಣೆಯು ತಕ್ಷಣ ಆಗುತ್ತದೆ. ಮೊಬೈಲ್ ವಾಲೆಟ್‌ಗಳಂತೆ ಮತ್ತೆ ವಾಲೆಟ್‌ನಿಂದ ಖಾತೆಗೆ ವರ್ಗಾಯಿಸುವ ಅಗತ್ಯವಿಲ್ಲ. ಈ ವ್ಯವಸ್ಥೆಯಲ್ಲಿ ನಿಮ್ಮ ಹಣ ನಿಮ್ಮ ಖಾತೆಗಳಲ್ಲಿಯೇ ಇರುತ್ತದೆ. ಮೊಬೈಲ್ ವಾಲೆಟ್‌ಗಳಲ್ಲಿ ನಿಮ್ಮ ಹಣ ಆ ಕಂಪೆನಿಗಳ ಬಳಿ ಇರುತ್ತದೆ.
- ನೀವು ಬ್ಯಾಂಕಿಗೆ ನೀಡಿರುವ ನಂಬರ್ ಹೊಂದಿದ ಮೊಬೈಲಿನಲ್ಲಿಯೇ ಯುಪಿಐ ಆ್ಯಪ್ ಅನ್ನು ಬಳಸಬೇಕಾಗುತ್ತದೆ.

### ಸ್ಮಾರ್ಟ್ ಫೋನ್ ಇಲ್ಲದಿದ್ದರೆ ಯುಎಸ್‌ಎಸ್‌ಡಿ ಬಳಸಿ

ಇನ್ನು ನಿಮ್ಮ ಬಳಿ ಸ್ಮಾರ್ಟ್‌ಫೋನ್ ಇಲ್ಲದಿದ್ದರೆ ಅಥವಾ ಇಂಟರ್ನೆಟ್ ಇಲ್ಲದಿದ್ದರೆ ಹೇಗೆ ಏನು ಮಾಡುವುದು ಎಂದು ಯೋಚಿಸಬೇಕಾಗಿಲ್ಲ. ಅಂತಹವರಿಗಾಗಿ ಯುಎಸ್‌ಎಸ್‌ಡಿ ಎಂಬ ಪದ್ಧತಿಯನ್ನು ಪರಿಚಯಿಸಲಾಗಿದೆ. ನಿಮ್ಮ ಮೊಬೈಲಿನಲ್ಲಿ *99# ಒತ್ತಿ ನಿಮ್ಮ ಬ್ಯಾಂಕ್ ಕೋಡ್ ಸೇರಿಸಿ ಕರೆ ಮಾಡಿ. ನಿಮ್ಮ ಬ್ಯಾಂಕ್ ನೀಡುವ ಪಾವತಿ ಅವಕಾಶಗಳು ಸಿಗುತ್ತವೆ. ಅಲ್ಲಿ ನೀಡಿರುವ ಸೂಚನೆಗಳಿಗೆ ಅನುಗುಣವಾಗಿ ನಿಮ್ಮ ಆಯ್ಕೆಗಳನ್ನು ಅನುಸರಿಸಿ. ಇದು ಅಷ್ಟೊಂದು ಸರಳ. ನಿಮ್ಮ ಬ್ಯಾಂಕ್ ಕೋಡ್ ತಿಳಿದಿದ್ದರೆ ಅದನ್ನೂ ಸೇರಿಸಿ ನೇರವಾಗಿ ಬಳಸಬಹುದು. ಉದಾಹರಣೆಗೆ,

* 99* 41# ಎಸ್‌ಬಿಐ
* 99* 42# ಪಂಜಾಬ್ ನ್ಯಾಷನಲ್ ಬ್ಯಾಂಕ್
* 99* 43# ಹೆಚ್‌ಡಿಎಫ್‌ಸಿ ಬ್ಯಾಂಕ್
* 99* 44# ಐಸಿಐಸಿಐ ಬ್ಯಾಂಕ್
* 99* 45# ಆಕ್ಸಿಸ್ ಬ್ಯಾಂಕ್
* 99* 46# ಕೆನರಾ ಬ್ಯಾಂಕ್
* 99* 47# ಬ್ಯಾಂಕ್ ಆಫ್ ಇಂಡಿಯಾ
* 99* 48# ಬ್ಯಾಂಕ್ ಆಫ್ ಬರೋಡಾ
* 99* 49# ಐಡಿಬಿಐ ಬ್ಯಾಂಕ್
* 99* 50# ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ
* 99* 51# ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ
* 99* 52# ಇಂಡಿಯನ್ ಓವರ್‌ಸೀಸ್ ಬ್ಯಾಂಕ್
* 99* 64# ವಿಜಯಾ ಬ್ಯಾಂಕ್
* 99* 73# ಸ್ಟೇಟ್ ಬ್ಯಾಂಕ್ ಆಫ್ ಮೈಸೂರು
* 99* 76# ಕರ್ಣಾಟಕ ಬ್ಯಾಂಕ್

ಬ್ಯಾಂಕ್ ಕೋಡ್ ತಿಳಿದಿಲ್ಲವಾದಲ್ಲಿ *99# ಗೆ ಡಯಲ್ ಮಾಡಿದಾಗ ಬ್ಯಾಂಕಿನ ಹೆಸರಿನ ಮೂರು ಅಕ್ಷರಗಳು ಅಥವಾ IFSC code ಬಳಸಿ ಬ್ಯಾಂಕನ್ನು ಆಯ್ಕೆ ಮಾಡಿಕೊಳ್ಳಬಹುದು. ಬ್ಯಾಲೆನ್ಸ್ ತಿಳಿಯಲು, ಹಣ ವರ್ಗಾಯಿಸಲು ಎಲ್ಲವೂ ಈ ವಿಧಾನದಲ್ಲೂ ಸಾಧ್ಯ.

ನಿಮ್ಮ ಸಾಮಾನ್ಯ ಮೊಬೈಲೇ ಈಗ ನಿಮ್ಮ ಹಣದ ಪರ್ಸ್ ಆಗಿ ಪರಿವರ್ತನೆಗೊಂಡಿದೆ!


**ಯಾವುದೇ ಪದ್ಧತಿಯನ್ನು ಬಳಸಿದರೂ ನಿಮ್ಮ ಸುರಕ್ಷತೆಗಾಗಿ ಈ ವಿಚಾರವನ್ನು ನೆನಪಿಡಿ:**

**ನಿಮ್ಮ ಪಾಸ್‌ವರ್ಡ್, ಪಿನ್ ಸಂಖ್ಯೆ, ಕಾರ್ಡ್ ಸಂಖ್ಯೆ, ಕಾರ್ಡ್ ಮೇಲಿರುವ ದಿನಾಂಕ, ಮೊಬೈಲಿಗೆ ಬಂದಿರುವ ಒನ್ ಟೈಮ್ ಪಾಸ್‌ವರ್ಡ್ ಇತ್ಯಾದಿಗಳನ್ನು ಯಾರೇ ಕೇಳಿದರೂ ಹೇಳಬೇಡಿ. ಬ್ಯಾಂಕಿನವರೇ ಕರೆ ಮಾಡಿ ಕೇಳಿದರೂ ಕೂಡ.**

## ಕನ್ಹಯ್ಯಲಾಲ್ ಮಾನೆಕ್‌ಲಾಲ್ ಮುನ್ಷಿ

ಕೆ.ಎಂ. ಮುನ್ಷಿ ಅಥವಾ ಕನ್ಹಯ್ಯಲಾಲ್ ಮಾನೆಕ್‌ಲಾಲ್ ಮುನ್ಷಿ (30 ಡಿಸೆಂಬರ್ 1887 – 8 ಫೆಬ್ರುವರಿ 1971) ಇವರು ಸ್ವಾತಂತ್ರ್ಯಪೂರ್ವ ಮತ್ತು ನಂತರದ ಕಾಲಘಟ್ಟದ ಅಪ್ಪಟ ರಾಷ್ಟ್ರವಾದಿ, ಚತುರ ಸಂಧಾನಕಾರ, ನಿಪುಣ ರಾಜಕಾರಣಿ, ಶಿಕ್ಷಣತಜ್ಞ, ಭಾರತೀಯ ವಿದ್ಯಾಭವನದ ಸಂಸ್ಥಾಪಕ, ಸಂವಿಧಾನ ರಚನಾ ಸಮಿತಿ ಮತ್ತು ಧ್ವಜ ಸಮಿತಿಗಳ ಪ್ರಮುಖ ಸದಸ್ಯ ಮತ್ತು ಇತಿಹಾಸಜ್ಞ ಮತ್ತು ಸಾಹಿತಿ – ಹೀಗೆ ಬಹುಮುಖ ಪ್ರತಿಭೆಗಳಿಂದ ಗುರುತಿಸಿಕೊಂಡ ಹಿರಿಯ ವ್ಯಕ್ತಿತ್ವ.

ವಿದ್ಯಾರ್ಥಿದೆಸೆಯಿಂದಲೇ ಮಹರ್ಷಿ ಅರವಿಂದರ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡರು. ಮುಂಬಯಿ ಪ್ರಾಂತದ ಗೃಹಮಂತ್ರಿಯಾಗಿ (1932) ದಕ್ಷ ಆಡಳಿತಗಾರನಾಗಿ ಗುರುತಿಸಿಕೊಂಡರು. 1948ರ ಜನವರಿಯಲ್ಲಿ ಹೈದರಾಬಾದ್ ರಾಜ್ಯಕ್ಕೆ ಭಾರತದ ಏಜೆಂಟ್ ಜನರಲ್ ಆಗಿ ನಿಯುಕ್ತಿಗೊಂಡು ಭಾರತದೊಂದಿಗೆ ಹೈದರಾಬಾದ್ ಸಂಸ್ಥಾನದ ವಿಲೀನಕ್ಕೆ ಬಹುವಾಗಿ ಶ್ರಮಪಟ್ಟರು.



**ಡಿಸೆಂಬರ್ 30 ಕೆ.ಎಂ. ಮುನ್ಷಿ ಜನ್ಮದಿನ**

ಗುಜರಾತಿ ಸಾಹಿತ್ಯದಲ್ಲಿ ಮುನ್ಷಿಯವರು ಅತ್ಯಂತ ವಿಶಿಷ್ಟ ಸ್ಥಾನಹೊಂದಿದ್ದಾರೆ. ಗುಜರಾತಿ ಮತ್ತು ಹಿಂದಿಯಲ್ಲಿ ಅವರು ರಚಿಸಿದ ಕಾದಂಬರಿಗಳು, ನಾಟಕ, ಸ್ಮೃತಿಗಳು ಮತ್ತು ಇತಿಹಾಸ ಸಂಕಲನದ ಕೆಲಸ ಅವರ ಅನುಪಮ ಪ್ರತಿಭೆಗೆ ಸಾಕ್ಷಿ. ಮಾತೃಭಾಷೆ ಗುಜರಾತಿಯಷ್ಟೇ ವಿದ್ವತ್ತು ಮತ್ತು ಪ್ರಭುತ್ವ ಇಂಗ್ಲೀಷಿನ ಮೇಲು ಹೊಂದಿದ್ದ ಮುನ್ಷಿ ಅವರು 'Gujrat and its Literature', 'Imperial Gurjars', `Creative Art of Life', 'The End of an Era', 'Bhagavad Geeta and Modern Life' ನಂತಹ ಮೇರುಕೃತಿಗಳ ಮೂಲಕ ಸಾರಸ್ವತ ಲೋಕದಲ್ಲಿಯೂ ಉನ್ನತಸ್ಥಾನ ಗಳಿಸಿದರು.

ರಾಜಕಾರಣಿ ಮತ್ತು ಸಾಹಿತಿಯಾಗಿದ್ದಂತೆ ಮುನ್ಷಿಯವರು ಪರಿಸರವಾದಿಗಳೂ ಹೌದು. ಆಹಾರ ಮತ್ತು ಕೃಷಿ ಖಾತೆಗಳ ಕೇಂದ್ರ ಮಂತ್ರಿಯಾಗಿದ್ದ 1950ರ ದಶಕದಲ್ಲೇ 'ವನಮಹೋತ್ಸವ'ದಂತಹ ಜನಪ್ರಿಯ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಹಸಿರು ಸಂಪತ್ತನ್ನು ಉಳಿಸಿಕೊಳ್ಳುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿದರು.

ನೆಲದ ಮಾತು


## ಕೆಸರಿನಿಂದ ಎದ್ದ ಕಲ್ಯಾಣಿ

ಮೂರು ಶತಮಾನಗಳ ಹಿಂದಿನ, ಸಂಪೂರ್ಣ ಮುಚ್ಚಿ ಹೋಗಿದ್ದ ಕಲ್ಯಾಣಿಯನ್ನು ಉತ್ಸಾಹಿ ಗ್ರಾಮಸ್ಥರ ತಂಡ ಸ್ವಚ್ಛಗೊಳಿಸಿ ಅಂದಗಾಣಿಸಿದೆ. ಕೊಚ್ಚೆ ಗುಂಡಿಯಂತಿದ್ದ ಕಲ್ಯಾಣಿಯಲ್ಲಿ ಸತತ 25 ದಿನಗಳ ಕಾಲ ಶ್ರಮದಾನ ಮಾಡಿ ತಿಳಿನೀರು ಉಕ್ಕುವಂತೆ ಮಾಡಿದ್ದಾರೆ. ಕಲ್ಯಾಣಿ ಒಳಗೆ ಮತ್ತು ಆಸುಪಾಸಿನಲ್ಲಿ ಬೆಳೆದಿದ್ದ ಗಿಡಗಂಟಿಗಳನ್ನು ಬುಡ ಸಹಿತ ಕಿತ್ತು ಹಸನು ಮಾಡಲಾಗಿದೆ. ಸುಮಾರು 20 ದಿನಗಳ ಕಾಲ, 25ಕ್ಕೂ ಹೆಚ್ಚು ಮಂದಿ ಗ್ರಾಮಸ್ಥರ ತಂಡ ಬೆವರು ಬಸಿದು ಕಲ್ಯಾಣಿಯನ್ನು ಸ್ವಚ್ಛಗೊಳಿಸಿದ್ದಾರೆ. ಶ್ರೀರಂಗಪಟ್ಟಣ–ಬನ್ನೂರು ರಸ್ತೆಯಲ್ಲಿರುವ ಮಂಡ್ಯಕೊಪ್ಪಲು ಗ್ರಾಮ ತಾಲ್ಲೂಕು ಕೇಂದ್ರದಿಂದ 10 ಕಿ.ಮೀ. ದೂರದಲ್ಲಿದ್ದು, ಊರಿನ ಸರ್ಕಾರಿ ಶಾಲೆಯ ಹಿಂದಿರುವ ಐತಿಹಾಸಿಕ ಕಲ್ಯಾಣಿ ಸದ್ಯ ಸುತ್ತಮುತ್ತಲ ಗ್ರಾಮಗಳ ಜನರಿಗೆ ಆಕರ್ಷಣೆಯ ಕೇಂದ್ರವಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ (ಎನ್‌ಆರ್‌ಇಜಿಎ)ಯ ಅನುಕೂಲ ಪಡೆದು ಕಲ್ಲಿನ ಕೊಳದ ಮೆಟ್ಟಿಲುಗಳ ದುರಸ್ತಿ, ಸುತ್ತಲೂ ತಂತಿ ಬೇಲಿ, ಕಲ್ಲು ಕಟ್ಟಡ ಮತ್ತು ಸಿಮೆಂಟ್ ನೆಲ ಹಾಸು ನಿರ್ಮಿಸಲಾಗಿದೆ. ಚಚ್ಚೌಕಾಕಾರದಲ್ಲಿ ನಿರ್ಮಿಸಿರುವ ಈ ಕಲ್ಯಾಣಿ 75 ಚದರ ಅಡಿ ವಿಸ್ತೀರ್ಣ ಹೊಂದಿದೆ. ನೆಲ ಮಟ್ಟದಿಂದ 20 ಅಡಿಗಳವರೆಗೆ ಕಾಡುಗಲ್ಲುಗಳಿಂದ ಮೆಟ್ಟಿಲುಗಳನ್ನು ಒಂದರ ಮೇಲೆ ಒಂದರಂತೆ ಕರಾರುವಕ್ಕಾಗಿ ಜೋಡಿಸಿದಂತೆ ನಿರ್ಮಿಸಲಾಗಿದೆ.







ಅದಕ್ಕಾಗಿ ಸಹಸ್ರಾರು ಕಲ್ಲುಗಳನ್ನು ಬಳಸಲಾಗಿದೆ. ತಳದಲ್ಲಿ ಹಿಟ್ಟುಕಲ್ಲು ಕಾಣುವವರೆಗೂ ಕೊಳವನ್ನು ತೋಡಲಾಗಿದೆ. ಇದೀಗ ಈ ಕಲ್ಯಾಣಿಯಲ್ಲಿ 25 ಅಡಿಗಳಷ್ಟು ನೀರು ತುಂಬಿದೆ. ಕೊಳವೆ ಬಾವಿ, ನಾಲೆಗಳು ಇರದಿದ್ದ 17ನೇ ಶತಮಾನದಲ್ಲಿ ಇದು ಊರಿಗೆ ನೀರು ಪೂರೈಸುವ ಪ್ರಮುಖ ಆಕರವಾಗಿತ್ತು. ಕಾಲ್ನಡಿಗೆಯಲ್ಲಿ ಹೋಗಿ ಬರುವ ಜನರಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಈ ಕಲ್ಯಾಣಿಯನ್ನು ನಿರ್ಮಿಸಲಾಗಿತ್ತು.

ಜೀರ್ಣೋದ್ಧಾರ ಮಾಡಿರುವ ಕಲ್ಯಾಣಿಯ ನೀರನ್ನು ಅಗತ್ಯ ಸಂದರ್ಭದಲ್ಲಿ ಬಳಸಿಕೊಳ್ಳಲಾಗುವುದು. ಅದರ ಸುತ್ತಲೂ ಉದ್ಯಾನ ನಿರ್ಮಿಸಿ ಆಲಂಕಾರಿಕ ಗಿಡಗಳನ್ನು ಬೆಳೆಸುತ್ತೇವೆ. ವಾಯು ವಿಹಾರಿಗಳು ಮತ್ತು ದಾರಿ ಹೋಕರು ಕೊಳದ ದಡದಲ್ಲಿ ಕುಳಿತು ದಣಿವಾರಿಸಿಕೊಳ್ಳಲು ಸುತ್ತಲೂ ಸಿಮೆಂಟ್ ಬೆಂಚ್‌ಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ ಎನ್ನುತ್ತಾರೆ ಗ್ರಾಮದ ಹಿರಿಯರು. (ಕೃಪೆ: ಪ್ರಜಾವಾಣಿ)

**ಸಂಪಾದಕೀಯ ಸಹಕಾರ** ಶ್ರೀಹರ್ಷ ಪೆರ್ಲ, ಶೈಲೇಶ್ ಕುಲಕರ್ಣಿ, ಪ್ರತಾಪ ಕೊಡಂಚ, ಶ್ರೀವತ್ಸ, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

## ಸಿನಿಮಾಕ್ಕೆ ಮುನ್ನ ರಾಷ್ಟ್ರಗೀತೆ ಕಡ್ಡಾಯ



ದೇಶದಾದ್ಯಂತ ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನಕ್ಕೆ ಮೊದಲು ರಾಷ್ಟ್ರಗೀತೆ ಹಾಡಬೇಕು ಮತ್ತು ಈ ಸಂದರ್ಭದಲ್ಲಿ ಜನರು ಗೌರವಪೂರ್ವಕವಾಗಿ ಎದ್ದು ನಿಲ್ಲಬೇಕು. ಈ ಸಂದರ್ಭದಲ್ಲಿ ಸಿನಿಮಾ ಪರದೆಯಲ್ಲಿ ರಾಷ್ಟ್ರಧ್ವಜವನ್ನು ಪ್ರದರ್ಶಿಸಬೇಕು ಎಂದು ಸರ್ವೋಚ್ಚ ನ್ಯಾಯಾಲಯ ನಿರ್ದೇಶನ ನೀಡಿದೆ.

ಜನರಲ್ಲಿ ಇದು ತಮ್ಮ ದೇಶ ಮತ್ತು ತಮ್ಮ ತಾಯ್ನಾಡು ಎಂಬ ಭಾವನೆ ಇರಬೇಕು. ರಾಷ್ಟ್ರಗೀತೆ ಮತ್ತು ಧ್ವಜ ಗೌರವಿಸುವುದು ಪ್ರತಿ ಪ್ರಜೆಯ ಕರ್ತವ್ಯ. ಈ ಆದೇಶವನ್ನು ಮುಖ್ಯ ಕಾರ್ಯದರ್ಶಿಗಳ ಮೂಲಕ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ತಲುಪಿಸಬೇಕು. ಒಂದು ವಾರದೊಳಗೆ ಇದು ಅನುಷ್ಠಾನಗೊಳ್ಳಬೇಕು ಎಂದು ನ್ಯಾಯಮೂರ್ತಿಗಳಾದ ದೀಪಕ್ ಮಿಶ್ರಾ ಮತ್ತು ಅಮಿತಾವ ರಾಯ್ ಅವರ ಪೀಠ ಆದೇಶಿಸಿದೆ. ಸಿನಿಮಾ ಆರಂಭಕ್ಕೆ ಮೊದಲು ರಾಷ್ಟ್ರಗೀತೆ ಹಾಡಲು ನಿರ್ದೇಶನ ನೀಡಬೇಕು. ಅದಕ್ಕೆ ಅಗತ್ಯವಾದ ನಿಯಮಗಳು ಮತ್ತು ಶಿಷ್ಟಾಚಾರ ರೂಪಿಸಬೇಕು ಎಂದು ಕೋರಿ ಶ್ಯಾಮ್ ನಾರಾಯಣ್ ಎಂಬವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.



**ಪರಿಸರವಾದಿ ಸಾಲು ಮರದ ತಿಮ್ಮಕ್ಕ ಬಿಬಿಸಿಯ ಜಗತ್ತಿನ 100 ಪ್ರಭಾವಿ ಮಹಿಳೆಯರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಬಿಬಿಸಿ ಪ್ರಕಟಿಸಿದ 2016ನೇ ಸಾಲಿನಪ್ರಭಾವಿ ಮಹಿಳೆಯರ ಪಟ್ಟಿಯಲ್ಲಿ ಭಾರತದ ಐವರು ಮಹಿಳೆಯರು ಸೇರಿದಂತೆ ತಮ್ಮ ಜೀವನವನ್ನು ಪರಿಸರ ಸಂರಕ್ಷಣೆಗೆ ಮುಡಿಪಾಗಿಟ್ಟ 105 ವರ್ಷದ ಸಾಲುಮರದ ತಿಮ್ಮಕ್ಕ ಅವರು ಸ್ಥಾನ ಪಡೆದಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಹುಲಿಕಲ್‌ನ ತಿಮ್ಮಕ್ಕ 80 ವರ್ಷಗಳಲ್ಲಿ 400 ಆಲದ ಮರಗಳನ್ನು ನೆಟ್ಟು ಬೆಳೆಸಿದ್ದಾರೆ ಎಂದು ಬಿಬಿಸಿ ಹೇಳಿದೆ.**

ತಮಿಳುನಾಡಿನ ಕಮುತಿಯಲ್ಲಿ 10 ಚ.ಕಿ.ಮೀ. ವಿಸ್ತೀರ್ಣದಲ್ಲಿ ಪ್ರಪಂಚದಲ್ಲೇ ಅತ್ಯಂತ ದೊಡ್ಡ ಸೌರ ವಿದ್ಯುತ್ ಸ್ಥಾವರ ನಿರ್ಮಾಣಗೊಂಡಿದೆ. ಈ ಸ್ಥಾವರ ಒಟ್ಟು 2.5ದಶ ಲಕ್ಷ ಸೌರಫಟಕಗಳನ್ನು ಹೊಂದಿದ್ದು, 648 ಮೆಘಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವುಳ್ಳದ್ದಾಗಿದೆ. ಅದಾನಿ ಸಂಸ್ಥೆಯ ಅನುದಾನದಲ್ಲಿ ನಿರ್ಮಾಣಗೊಂಡಿರುವ ಈ ಸ್ಥಾವರವನ್ನು ಕೇವಲ 8 ತಿಂಗಳಿನಲ್ಲಿ ಪೂರ್ಣಗೊಳಿಸಲಾಗಿದೆ.



**2017ರ ಜನವರಿಯಲ್ಲಿ ಒಂದೇ ಬಾರಿಗೆ 83 ಉಪಗ್ರಹಗಳ ಉಡಾವಣೆ ಮಾಡುವುದರ ಮೂಲಕ ಹೊಸ ವಿಶ್ವದಾಖಲೆ ನಿರ್ಮಿಸಲು ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಸಿದ್ಧವಾಗುತ್ತಿದೆ. ಪಿ.ಎಸ್.ಎಲ್.ವಿ. 37 ಏಕಕಾಲಕ್ಕೆ ಭಾರತದ 3 ಉಪಗ್ರಹಗಳು ಸೇರಿದಂತೆ ಅಮೆರಿಕಾ, ಇಸ್ರೇಲ್, ನೆದರ್‌ಲ್ಯಾಂಡ್, ಸ್ವಿಜರ್ಲ್ಯಾಂಡ್ ಹಾಗೂ ಕಝಕಿಸ್ತಾನಕ್ಕೆ ಸೇರಿದ ಉಪಗ್ರಹಗಳನ್ನು ಅಂತರಿಕ್ಷಕ್ಕೆ ಕೊಂಡೊಯ್ಯಲಿದೆ.**

## ಪ್ರತಿಭೆ ಅನಾವರಣಕ್ಕೆ ಬೇಕು: ಗುರಿ, ಶ್ರಮ, ಕಷ್ಟ ಸಹಿಸುವ ತಾಳ್ಮೆ

ಸೆಲೆಬ್ರಿಟಿಗಳಲ್ಲ ಸದ್ದಿಲ್ಲದ ಸಾಧಕರು



**ಹಣವಿದ್ದರೆ ಮಾತ್ರ ಉನ್ನತ ಶಿಕ್ಷಣ ಎಂಬ ಸವಕಲು ಮಾತಿಗೆ ತಿಲಾಂಜಲಿ ಇಟ್ಟ ಸಾಧಕಿ ಉತ್ತರ ಪ್ರದೇಶ ಮೂಲದ ಯುವತಿ ಶಿವಾಂಗಿ. ಶಿವಾಂಗಿ, ಕಾನ್ಪುರದಿಂದ 60 ಕಿ.ಮೀ. ದೂರದಲ್ಲಿರುವ ದೆಹಾ ಎಂಬ ಕುಗ್ರಾಮದವರು. ತಂದೆ ಕೃಷಿ ಭೂಮಿಯಲ್ಲಿ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರೂ ಮಗಳನ್ನು ಚೆನ್ನಾಗಿ ಓದಿಸಬೇಕೆಂಬ ಆಸೆ ಅವರದ್ದು. ತಂದೆಯ ಇಚ್ಛೆಯಂತೆ ಶಿವಾಂಗಿ ಕೂಡ ಚೆನ್ನಾಗಿಯೇ ಓದುತ್ತಿದ್ದರು. 10ನೇ ತರಗತಿಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಪಾಸಾದಾಗ, ಕಾಲೇಜು ವ್ಯಾಸಂಗಕ್ಕಾಗಿ ಕುಟುಂಬ ಸಮೇತ ಕಾನ್ಪುರಕ್ಕೆ ವಲಸೆ ಬಂದರು. ಕಾಲೇಜಿಗೆ ಸೇರಿದಾಗ ಹಣಕಾಸಿನ ಸಮಸ್ಯೆ ಎದುರಾಯಿತು. ಅಪ್ಪ ಕೂಲಿನಾಲಿ ಮಾಡಿಕೊಂಡು ತರುತ್ತಿದ್ದ ಹಣ ಕುಟುಂಬದ ಹೊಟ್ಟೆಗೂ ಸಾಲುತ್ತಿರಲಿಲ್ಲ! ಈ ವೇಳೆ ಅಪ್ಪನ ಪರಿಚಿತರಿಂದ ಬೆಳಿಗ್ಗೆ ಪೇಪರ್ ಹಂಚುವ ಕೆಲಸಕ್ಕೆ ಸೇರಿಕೊಂಡ ಶಿವಾಂಗಿ ಮನೆ ಮತ್ತು ಕಾಲೇಜಿನ ಖರ್ಚುಗಳನ್ನು ನಿಭಾಯಿಸಿದರು. ದಿನಪತ್ರಿಕೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಕೊಡುವ ಆನಂದ್ ಅವರ ಸೂಪರ್–30 ಸಂಸ್ಥೆ ಬಗ್ಗೆ ತಿಳಿದು, ಅವರನ್ನು ನೇರವಾಗಿ ಭೇಟಿ ಮಾಡಿ ತಮ್ಮ ಕನಸು ಮತ್ತು ಗುರಿಯನ್ನು ಹೇಳಿಕೊಂಡರು. ಪ್ರತಿಭೆ ಗುರುತಿಸಿದ ಆನಂದ್, ತಮ್ಮ ಮನೆಯಲ್ಲಿ ಆಶ್ರಯ ಕೊಟ್ಟು ಉಚಿತವಾಗಿ ಕೋಚಿಂಗ್ ನೀಡಿದರು. ಐಐಟಿ–ಜೆಇಇ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಇಂದು ಪ್ರತಿಷ್ಠಿತ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಶಿವಾಂಗಿ, ಪ್ರತಿಭೆ ಅನಾವರಣಕ್ಕೆ ಬೇಕಾಗಿರುವುದು ದುಡ್ಡಲ್ಲ, ಗುರಿ, ಶ್ರಮ, ಕಷ್ಟಗಳನ್ನು ಸಹಿಸುವ ತಾಳ್ಮೆ ಎಂಬುದಕ್ಕೆ ಸಾಕ್ಷಿಯಾಗಿ ನಿಂತಿದ್ದಾರೆ. www.facebook/shivangi/super-30**



ಇಂಗ್ಲೆಂಡಿನ ಹಿಂದೂಗಳ ಒಂದು ಗುಂಪು ಹಾಗೂ ಬ್ರಿಟಿಷ್ ಸಸ್ಯಾಹಾರಿಗಳು ಗೋಮಾಂಸದ ಕೊಬ್ಬುರೂಪದ ಪ್ರಾಣಿಗಳ ಕೊಬ್ಬುಗಳನ್ನು ಬಳಸಿ ಮುದ್ರಿಸಲಾದ ಹೊಸ 5ಪೌಂಡ್ ಮುಖಬೆಲೆಯ ನೋಟುಗಳನ್ನು ಬ್ಯಾನ್ ಮಾಡುವಂತೆ ಆಕೆಯು ಪ್ರತಿಭಟಿಸಲು ಮುಂದಾಗಿದ್ದಾರೆ. ಇಂಗ್ಲೆಂಡ್‌ನ ಅತೀ ದೊಡ್ಡ ಹರೇ ಕೃಷ್ಣ ದೇವಾಲಯಗಳಲ್ಲಿ ಒಂದಾದ ದಕ್ಷಿಣ ಇಂಗ್ಲೆಂಡಿನ ಹರ್ಟ್‌ಫೋರ್ಡ್ ಶೈರ್‌ನಲ್ಲಿರುವ ಭಕ್ತಿವೇದಾಂತ ಮನೋರ್ ದೇವಾಲಯ ಪ್ರತಿಭಟನೆಯ ಮುಂಚೂಣಿಯಲ್ಲಿದೆ. ದೇವಾಲಯದ ಆಡಳಿತ ಮಂಡಳಿ ತನ್ನ ಫೇಸ್‌ಬುಕ್ ಸೈನ್‌ಇನ್ ಪೋಸ್ಟ್‌ನಲ್ಲಿ ಪ್ರಾಣಿಗಳ ಕೊಬ್ಬು ಹೊಂದಿದ 5 ಪೌಂಡ್‌ನ ನೋಟುಗಳನ್ನು ಸ್ವೀಕರಿಸಲಾಗುವುದಿಲ್ಲ. ಅನಾನುಕೂಲತೆಗೆ ಕ್ಷಮೆ ಕೋರುತ್ತೇವೆ ಎಂದು ತಿಳಿಸಿದೆ. ಈಗಾಗಲೇ ಹಲವು ದೇವಾಲಯಗಳಲ್ಲಿ 5 ಪೌಂಡ್ ನೋಟ್‌ಗಳನ್ನು ರದ್ದುಗೊಳಿಸಲಾಗಿದೆ ಎನ್ನಲಾಗುತ್ತಿದ್ದು, ಅಧಿಕೃತ ಸಂಖ್ಯೆ ತಿಳಿದುಬಂದಿಲ್ಲ.


## ಸಾಲುದ್ದದ ಸುದ್ದಿಗಳು



**ಬಿಹಾರದ ಬೋಧಗಯಾದ ಮಹಾಬೋಧಿ ದೇವಾಲಯದಲ್ಲಿ ಡಿ. 2 ರಿಂದ 12ರ ವರೆಗೆ 12ನೇ ಬೌದ್ಧ ಧರ್ಮಾಚರಣೆ ನಡೆಯಲಿದೆ. 10 ದಿನಗಳ ಧರ್ಮಾಚರಣೆಯ ಅಂತಾರಾಷ್ಟ್ರೀಯ ತ್ರಿಪೀಠಕ ಪಠಣದಲ್ಲಿ ಸಾವಿರಾರು ಭಕ್ತರು ಭಾಗವಹಿಸಿದ್ದಾರೆ. ಸುಮಾರು 15 ರಾಷ್ಟ್ರಗಳಿಂದ ಆಗಮಿಸಿದ ಬೌದ್ಧಸಂನ್ಯಾಸಿಗಳು ಮತ್ತು ಭಕ್ತರು ತಮ್ಮ ಸಾಂಪ್ರದಾಯಿಕ ಉಡುಪುಗಳನ್ನು ಧರಿಸಿ ಮಹಾಬೋಧಿ ದೇವಾಲಯಕ್ಕೆ ಭೇಟಿ ನೀಡಿ ವಿಶ್ವಶಾಂತಿಗಾಗಿ ಶ್ಲೋಕಗಳ ಪಠಣ ನಡೆಸಿದ್ದಾರೆ. 2006ರಲ್ಲಿ ಆರಂಭಗೊಂಡ ಈ ಧರ್ಮಾಚರಣೆಯಲ್ಲಿ 250 ಬೌದ್ಧ ಸಂನ್ಯಾಸಿಗಳ ಉಪಸ್ಥಿತರಿದ್ದರು. ಈ ಆಚರಣೆ ವೇಳೆ ಬೌದ್ಧಸಂನ್ಯಾಸಿಗಳು ಬೋಧಿವೃಕ್ಷದ ಅಡಿಯಲ್ಲಿ ಬುದ್ಧನ ಬೋಧನೆಗಳ ಪಠಣ ಮಾಡುತ್ತಾರೆ. 2002ರಲ್ಲಿ ಯುನೆಸ್ಕೋ ಮಹಾಬೋಧಿ ದೇವಾಲಯವನ್ನು ವಿಶ್ವ ಪರಂಪರೆಯ ಸ್ಥಳ ಎಂದು ಘೋಷಿಸಿತ್ತು.**

ಕಾಶ್ಮೀರ ಕಣಿವೆಯ ಆ ಗುಂಡಿನ ಮೊರೆತಗಳ ಜೀವ ಭಯದ ಸದ್ದಿನಲ್ಲೂ ಗುಲಾಬಿ ಹೂವಿನಂತಹ ಪ್ರೀತಿ ಅರಳಬಲ್ಲದು ಎಂಬುದುನ್ನು ತೋರಿಸಿಕೊಟ್ಟವರು ಕಾಶ್ಮೀರದ ಯುವತಿ ನಸ್ರತ್ ಜಹಾಂ ಅರಾ. ಇವರು ಮೂಲತಃ ಕಾಶ್ಮೀರದ ಪುಲ್ವಾಮಾ ಎಂಬ ಸಣ್ಣ ಪಟ್ಟಣದವರು. ಈ ಭಾಗದಲ್ಲಿ, ಪ್ರತ್ಯೇಕತವಾದಿಗಳಿಂದಾಗಿ ವರ್ಷಕ್ಕೆ ನೂರಾರು ದಿನಗಳನ್ನು ಮಹಿಳೆಯರು ಮನೆಯಲ್ಲೇ ಕುಳಿತು ಕಳೆಯಬೇಕಾಗುತ್ತದೆ. ದೆಹಲಿಯಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿರುವ ನಸ್ರತ್, ಇಲ್ಲಿನ ಮಹಿಳೆಯರಿಗಾಗಿ ಏನಾದರೂ ಮಾಡಬೇಕು, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂಬ ಹಂಬಲಿಸಿದರು. ಆದರೆ ಮನೆಯವರ ಒತ್ತಾಯಕ್ಕೆ ಮಣಿದು ಮೂರ್ನಾಲ್ಕು ವರ್ಷ ಕಾಶ್ಮೀರದ ಹೊರಗೆಬಂದು ಕೆಲಸ ಮಾಡಿದರು. ಕೆಲಸ ಬಿಟ್ಟು ಪುನಃ ಪುಲ್ವಾಮಾಕ್ಕೆ ಮರಳಿ, ಹೂವಿನ ಉದ್ಯಮ ನಡೆಸಲು ನಿರ್ಧರಿಸಿದರು. ಮಗಳ ಇಚ್ಛೆಗೆ ಪೋಷಕರು ಬೆನ್ನೆಲುಬಾಗಿ ನಿಂತರು. ಆರಂಭದಲ್ಲಿ ರೈತರಿಂದ ಹೂಗಳನ್ನು ಖರೀದಿಸಿ ದೆಹಲಿ ಮಾರುಕಟ್ಟೆಗೆ ಕಳುಹಿಸುವ ಹೂವಿನ ವ್ಯಾಪಾರ ನಡೆಸಿದರು. ನಂತರ ಈ ವ್ಯಾಪಾರಕ್ಕೆ ಉದ್ದಿಮೆ ರೂಪ ಕೊಟ್ಟರು. ಇದಕ್ಕೆ 'ಪೆಟಲ್ಸ್' ಎಂದು ನಾಮಕರಣ ಮಾಡಿ ತಂತ್ರಜ್ಞಾನದ ಸ್ಪರ್ಶ ನೀಡಿದರು. ಸ್ಥಳೀಯ ಮಹಿಳೆಯರಿಗೆ ಹೂ ಕಟ್ಟುವ, ಹಾರ ಮಾಡುವ ತರಬೇತಿ ಕೊಟ್ಟು ಇನ್ನೂರಕ್ಕೂ ಹೆಚ್ಚು ಮಹಿಳೆಯರಿಗೆ ಉದ್ಯೋಗ ಕೊಡುವ ಮೂಲಕ ನಸ್ರತ್ ಅಂದುಕೊಂಡಿದ್ದನ್ನು ಸಾಧಿಸಿದರು. ಇಂದು ವಾರ್ಷಿಕ ಎರಡು ಕೋಟಿ ರೂಪಾಯಿಗೂ ಹೆಚ್ಚು ವಹಿವಾಟು ನಡೆಸುವ ಮಟ್ಟಕ್ಕೆ ಪೆಟಲ್ಸ್ ಉದ್ಯಮ ಬೆಳೆದಿದೆ.







ದೀಪಾವಳಿ ಅಂಚೆ ಚೀಟಿ ಹೊರತರಬೇಕು ಎಂದು ಅಮೆರಿಕದಲ್ಲಿ ಹಿಂದೂಗಳು, ಜೈನರು, ಸಿಖ್ಖರು, ಬೌದ್ಧರು, ಕ್ರೈಸ್ತರು ಮುಸಲ್ಮಾನರು ಸೇರಿದಂತೆ ನಾನಾ ಸಮುದಾಯಗಳು ಕಾಗದದ ಮನವಿಗಳಲ್ಲಿ ಸಹಿ ಮಾಡಿ, ಅಮೆರಿಕ ಸರಕಾರವನ್ನು ಒತ್ತಾಯಿಸಿದ್ದರು. 7 ವರ್ಷಗಳ ಪ್ರಯತ್ನಗಳ ನಂತರ ಇದೀಗ ವಿಶ್ವಸಂಸ್ಥೆ ಅಂಚೆ ಚೀಟಿಯನ್ನು ಹೊರತಂದಿದೆ. ಇದೇ ಮೊತ್ತಮೊದಲ ಬಾರಿಗೆ ವಿಶ್ವಸಂಸ್ಥೆಯಲ್ಲಿ ದೀಪಾವಳಿ ಹಬ್ಬವನ್ನು ಆಚರಿಸಲಾಗಿದೆ. ಅಮೆರಿಕ ಅಂಚೆ ಸೇವೆಯಲ್ಲಿ ಈವರೆಗೆ 1.70 ಲಕ್ಷ ದೀಪಾವಳಿ ಅಂಚೆ ಚೀಟಿಗಳು ಮಾರಾಟವಾಗಿದ್ದು, ಇದೊಂದು ಐತಿಹಾಸಿಕ ದಾಖಲೆಯಾಗಿದೆ ಎಂದು ಅಂಚೆ ಚೀಟಿ ಯೋಜನೆಯ ಮುಖ್ಯಸ್ಥೆ ರಂಜು ಬಾತ್ರಾ ತಿಳಿಸಿದರು. ದೀಪಾವಳಿ ಅಂಚೆ ಚೀಟಿ ಬಿಡುಗಡೆಗೆ 23 ರಾಷ್ಟ್ರಗಳು ಬೆಂಬಲ ಸೂಚಿಸಿವೆ



**ದಾಖಲೆಯ ಸಂಖ್ಯೆಯಲ್ಲಿ ಶರಣಾಗುತ್ತಿರುವ ನಕ್ಸಲರು!**

- **2011 ರಿಂದ ಈವರೆಗೆ – 3766**
- **2016ರಲ್ಲಿ – 1399**
- **2016ರ ನವೆಂಬರ್‌ನಲ್ಲಿ – 564**

**ನವೆಂಬರ್ ತಿಂಗಳಲ್ಲಿ (ಪ್ರಾರಂಭದ 28 ದಿನಗಳಲ್ಲಿ) ದೇಶದಾದ್ಯಂತ 564 ಮವೋವಾದಿಗಳು ಶರಣಾಗಿದ್ದಾರೆ. ಇದು ಒಂದು ತಿಂಗಳ ಅವಧಿಯಲ್ಲಿ ಅತೀ ಹೆಚ್ಚಿನ ಸಂಖ್ಯೆಯ ನಕ್ಸಲ್ ಶರಣಾಗತಿಯ ಹೊಸ ದಾಖಲೆಯಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಲವು ನೀತಿಗಳು, ಇತ್ತೀಚಿನ ದಿನಗಳಲ್ಲಿ ಪ್ರಮುಖ ನಕ್ಸಲ್–ಪೀಡಿತ ರಾಜ್ಯಗಳಲ್ಲಿ ಪೊಲೀಸರು ಹಾಗೂ ಸಿ.ಆರ್.ಪಿ.ಎಫ್. ನಡೆಸುತ್ತಿರುವ ಬಿರುಸಿನ ಕಾರ್ಯಾಚರಣೆಗಳು ಹಾಗೂ ಅಪ–ನಗದೀಕರಣ (500 ಹಾಗೂ 1000 ಮುಖಬೆಲೆಯ ಹಳೇ ನೋಟುಗಳ ರದ್ದತಿ) ಈ ಪ್ರಮಾಣದಲ್ಲಿ ನಕ್ಸಲ್ ಶರಣಾಗತಿ ಏರಿಕೆಯಾಗಲು ಪ್ರಮುಖ ಕಾರಣವಾಗಿದೆ. ಪ್ರಧಾನಿ ನರೇಂದ್ರ ಮೋದಿ ನೋಟು ಅಮಾನ್ಯಗೊಳಿಸಿದ (ನ. 8ರ) ನಂತರದ 20 ದಿನಗಳಲ್ಲಿ 469 ನಕ್ಸಲರು ಶರಣಾಗಿರುವುದು ಸರ್ಕಾರದ ಅಪ–ನಗದೀಕರಣದ ಆದೇಶ ಸಮಾನತೆಯ ಘೋಷಣೆಗಳ ಮೂಲಕ ಅಮಾಯಕರ ಹತ್ಯೆ ನಡೆಸುತ್ತಿದ್ದ ನಕ್ಸಲರಿಗೆ ಸರಿಯಾದ ಪೆಟ್ಟನ್ನೇ ನೀಡಿದೆ ಎಂಬುದನ್ನು ಖಚಿತಪಡಿಸುತ್ತದೆ.**

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-12-2016



# ಸಂಘದ ಮನೆಯ 'ಸೂರು' ಗಟ್ಟಿಗೊಳಿಸಿ ಮರೆಯಾದ 'ಸೂರ್ಯ'

ಒಬ್ಬ ಪ್ರಚಾರಕ ಹೇಗಿರಬೇಕೆಂದರೆ ಆತ ಹಗಲೂರಾತ್ರಿ ನಿರಂತರ ಕೆಲಸಮಾಡಿ ರಾತ್ರಿ ದಿಂಬಿಗೆ ತಲೆಕೊಟ್ಟರೆ ತಕ್ಷಣ ನಿದ್ದೆ ಆವರಿಸಿಕೊಳ್ಳಬೇಕು. ಆ ರೀತಿ ಶ್ರಮಪಡಬೇಕು ಎಂದು ಗುರೂಜಿಯವರು ಹೇಳುತ್ತಿದ್ದರು. ಪ್ರಚಾರಕ ಹಲವು ಬಗೆಯ ಕಷ್ಟಗಳನ್ನು ಸಹಿಸಬೇಕಾಗುತ್ತದೆ. ಮೋಹಗಳನ್ನು ಗೆಲ್ಲಬೇಕಾಗುತ್ತದೆ. ಏಕೆಂದರೆ ಆತ ಕೆಲಸಮಾಡುವುದು ಜನರ ಮಧ್ಯದಲ್ಲಿ; ಕಾಡಿನಲ್ಲಲ್ಲ. ಅಲ್ಲಿ ಆತನ ಸ್ನೇಹಿತರು, ಬಂಧುಬಳಗ ಎಲ್ಲರೂ ಇರುತ್ತಾರೆ. ಸ್ನೇಹಿತರು ಒಳ್ಳೆಯ ಉದ್ಯೋಗದಲ್ಲಿದ್ದು ಮದುವೆ ಮಾಡಿಕೊಂಡು ಸುಖಸಂಸಾರ ನಡೆಸುತ್ತಿರುವುದು ಇವನಿಗೂ ಕಾಣುತ್ತಿರುತ್ತದೆ. ಆಗ ಈ ಪ್ರಚಾರಕನಲ್ಲೂ ಭಾವನೆಗಳ ಹೊಯ್ದಾಟ ಆಗುವುದು ಸಹಜ. ಆದರೆ ಅಂತಹ ಸ್ಥಿತಿಯಿಂದ ಆತ ಮೇಲೆದ್ದು ನಿಂತು ಕಾರ್ಯನಿರ್ವಹಿಸಬೇಕು. ಮನಸ್ಸು ಗಟ್ಟಿಮಾಡಿಕೊಳ್ಳಬೇಕು. ಸ್ವಾಮಿ ವಿವೇಕಾನಂದರಂಥವರಿಗೂ ಇಂಥ ಪ್ರಶ್ನೆಗಳು ಕಾಡಿದ್ದವು. ಸನ್ಯಾಸಿಯಾಗಿದ್ದರೂ ಅವರಿಗೆ ಮನೆಯ ಮೇಲಿನ ಮೋಹ ಒಂದು ಬಾರಿ ಕಾಡಿತ್ತು. ಒಮ್ಮೆ ತಮ್ಮ ತಾಯಿಯವರ ನೆನಪಾಗಿ ಅವರನ್ನು ನೋಡಲು ಹೋಗಿದ್ದಾಗ ಮನೆಯಲ್ಲಿದ್ದ ಕಡುಬಡತನ, ಊಟಕ್ಕೇ ತತ್ವಾರದ ಸ್ಥಿತಿಕಂಡು ಅವರ ಮನಸ್ಸು ವಿಹ್ವಲಗೊಂಡಿತ್ತು. ಆದರೆ ಇನ್ನೊಂದೆಡೆ ಪರಮಹಂಸರು ನಿರ್ಧರಿಸಿದ ತನ್ನ ಬದುಕಿನ ಗುರಿ ಸಾಧಿಸಬೇಕೆಂಬ ತುಡಿತವೂ ತೀವ್ರವಾಗಿತ್ತು. ಅದಕ್ಕೇ ಅವರು ತಮ್ಮ ಕೃತಿಯಲ್ಲಿ ಒಂದೆಡೆ ಹೇಳಿದ್ದಾರೆ: "ಶ್ರೇಷ್ಠವಾದುದನ್ನು ತ್ಯಾಗವಿಲ್ಲದೇ ಸಾಧಿಸಲಾಗದು" (nothing great can be achieved without great sacrifice!)

ಇದು ಕೃ. ಸೂರ್ಯನಾರಾಯಣ ರಾವ್ (ಸೂರೂಜಿ) ಅವರದೇ ಮಾತುಗಳು. ಈ ಮಾತುಗಳಂತೆಯೇ ತಮ್ಮ 93 ವರ್ಷಗಳ ಇಡೀ ಜೀವನವನ್ನು ಸಮಾಜಕ್ಕಾಗಿ ಗಂಧದಂತೆ ತೇಯ್ದುವರು ಅವರು. ಅವರು ಇತ್ತೀಚೆಗೆ (ನವೆಂಬರ್ 18 ರಂದು) ಇಹಲೋಹ ತ್ಯಜಿಸಿದ್ದಾರೆ. ಜೀವನದುದ್ದಕ್ಕೂ ಹಿರಿ-ಕಿರಿಯರಿಗೆ ಪ್ರೇರಕರಾಗಿದ್ದ ಸೂರೂಜೀ ಅವರ ಜೀವನದ ಕೆಲ ನೆನಪುಗಳು:



ಅಧಿಕೃತವಾಗಿ ಅವರು 1946ರಲ್ಲಿ ಸಂಘದ ಪೂರ್ಣಾವಧಿ ಕಾರ್ಯಕರ್ತರಾದರೂ ಅದಕ್ಕೂ ಮುಂಚೆ ವಿದ್ಯಾರ್ಥಿಯಾಗಿರುವಾಗಲೇ ಅವರು ಒಂದು ರೀತಿಯಲ್ಲಿ ಪೂರ್ಣಾವಧಿ ಕಾರ್ಯಕರ್ತರೇ ಆಗಿದ್ದರು. ಬಿಎಸ್ಸಿ ಪದವಿ ಓದುತ್ತಿರುವಾಗ ಅವರು ಪ್ರತಿ ಶನಿವಾರ ರಾತ್ರಿ ರೈಲಿನಲ್ಲಿ ಶಿವಮೊಗ್ಗಕ್ಕೆ ಹೋಗುತ್ತಿದ್ದರು. ಭಾನುವಾರ ಅಲ್ಲಿ ಸಾಂಘಿಕ್, ಬೈಠಕ್, ಸ್ವಯಂಸೇವಕರ ಸಂಪರ್ಕ, ಅವರೊಡನೆ ಮಾತುಕತೆ ಇತ್ಯಾದಿ ಮುಗಿಸಿಕೊಂಡು ಅದೇ ದಿನ ರಾತ್ರಿ ರೈಲಿಗೆ ಬೆಂಗಳೂರಿಗೆ ಹೊರಡುತ್ತಿದ್ದರು. ಸೋಮವಾರ ಬೆಳಿಗ್ಗೆ ಮತ್ತೆ ಯಥಾಪ್ರಕಾರ ಕಾಲೇಜಿಗೆ.

ಸೂರೂಜಿ ಒಬ್ಬ ಅತ್ಯುತ್ತಮ ಕುಶಲ ಸಂಘಟಕ ಎಂಬುದಕ್ಕೆ 1969ರಲ್ಲಿ ಉಡುಪಿಯಲ್ಲಿ ಯಶಸ್ವಿಯಾಗಿ ಜರುಗಿದ ಐತಿಹಾಸಿಕ ವಿಶ್ವ ಹಿಂದು ಪರಿಷತ್ ಸಮ್ಮೇಳನವೇ ದಿವ್ಯಸಾಕ್ಷಿ. ಈ ಸಮ್ಮೇಳನಕ್ಕೆ ನಿರೀಕ್ಷೆಯ ದುಪ್ಪಟ್ಟು ಪ್ರತಿನಿಧಿಗಳು ಆಗಮಿಸಿದಾಗ ಸ್ಥಳೀಯ ಪ್ರಮುಖರು ಕಂಗಾಲಾಗಿದ್ದರು. ಆದರೆ ಸಮ್ಮೇಳನದ ಹೊಣೆಹೊತ್ತ ಸೂರೂಜೀ, ಉಡುಪಿಯ ಮನೆಮನೆಗಳ ಬಾಗಿಲುತೆರೆದು ಪ್ರತಿನಿಧಿಗಳಿಗೆ ಆತಿಥ್ಯ ನೀಡಬೇಕೆಂದು ಮನವಿ ಮಾಡಿಕೊಂಡು, ಉಡುಪಿಯ ಜನ ಹಾಗೆಯೇ ನಡೆದುಕೊಂಡರು. ಹೀಗೆ ಸಮ್ಮೇಳನದಲ್ಲಿ ಯಾವುದೇ ಅವ್ಯವಸ್ಥೆಯಾಗದಂತೆ ನೋಡಿಕೊಂಡಿದ್ದನ್ನು ಯಾರೂ ಮರೆಯಲಾರರು. ಮೊದಲಬಾರಿಗೆ ಆ ಸಮ್ಮೇಳನದ ವೇದಿಕೆಯಲ್ಲಿ ವಿವಿಧ ಜಾತಿ, ಮತ, ಪಂಥಗಳ ನೂರಕ್ಕೂ ಹೆಚ್ಚು ಮಠಾಧೀಶರು, ಸಂತರನ್ನು ಒಟ್ಟಿಗೆ ಸೇರಿಸಿದ ಯಶಸ್ಸಿನಲ್ಲೂ ಅವರದೇ ಪ್ರಮುಖ ಪಾತ್ರ. ಈ ಸಮ್ಮೇಳನದಲ್ಲಿಯೇ ಮಠಾಧೀಶರು-ಸಂತರೆಲ್ಲರು ಒಕ್ಕೊರಲಿನಿಂದ 'ಹಿಂದುಗಳೆಲ್ಲ ಸಹೋದರರು; ಯಾವುದೇ ಹಿಂದು ಪತಿತನಲ್ಲ' ಎಂಬ ಘೋಷಿಸಿದ್ದು. ಸಂಘವಿರೋಧಿ ವಾತಾವರಣ ಹೊಂದಿದ್ದ, ಹಿಂದು ಸಂಘಟನೆಯ ಕಾರ್ಯಕ್ಕೆ ಕಬ್ಬಿಣದ ಕಡಲೆಯಂತಿದ್ದ ತಮಿಳುನಾಡಿನಲ್ಲಿ ಹಿಂದುತ್ವದ ಹೂವರಳಿಸಿದ ಸಾಹಸ ಸೂರೂಜಿಯವರದು.

ಕನಾಟಕದಿಂದ ಹೊರಟ ಮೊತ್ತಮೊದಲ ಪ್ರಚಾರಕರಲ್ಲೊಬ್ಬರು.

ಸ್ವಾತಂತ್ರ್ಯಪೂರ್ವ ಕಾಲದಿಂದಲೂ (1942ರಿಂದ) ಕನ್ನಡ ನೆಲದಲ್ಲಿ ಸಂಘ, ವಿವಿಧ ಕ್ಷೇತ್ರಗಳ ಹುಟ್ಟು ಮತ್ತು ಬೆಳವಣಿಗೆಯನ್ನು ಅತ್ಯಂತ ಹತ್ತಿರದಿಂದ ಬಲ್ಲವರು.

ಆರೆಸ್ಸೆಸ್ ಮೊದಲ ಸೇವಾ ಪ್ರಮುಖರಾಗಿ ದೇಶಾದ್ಯಂತ ಸೇವಾ ಚಟುವಟಿಕೆಗಳಿಗೆ ವೇಗ ನೀಡಿದರು.

ತಮ್ಮ ಬಿ.ಎಸ್ಸಿ. (ಆನರ್ಸ್) ಪದವಿ ಮುಗಿದ ಬಳಿಕ 1946ರಿಂದ ಸಂಘದ ಪ್ರಚಾರಕರಾಗಿದ್ದ ಸೂರೂಜಿ ಅವರದು ಸಂಪೂರ್ಣ ಸಂಘಸಮರ್ಪಿತ ಬದುಕು. ಸಂಘದಲ್ಲಿ ಹತ್ತುಹಲವು ಗುರುತರ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ. ವಿದ್ಯಾರ್ಥಿ ದೆಸೆಯಿಂದಲೇ ಅವರಿಗೆ ಸಂಘದ ಸಂಪರ್ಕ. ಬೆಂಗಳೂರು ವಿಭಾಗ ಪ್ರಚಾರಕ, ಕರ್ನಾಟಕ ಉತ್ತರ (ಇಂದಿನ ಉತ್ತರ ಕರ್ನಾಟಕ ಪ್ರಾಂತ) ಸಂಭಾಗ ಪ್ರಚಾರಕ, ದಕ್ಷಿಣ ಸಹಕ್ಷೇತ್ರ ಪ್ರಚಾರಕ, ಅನಂತರ ಶ್ರೀಗುರೂಜಿಯವರ ಆದೇಶದಂತೆ ಸಂಘಕಾರ್ಯದ ದೃಷ್ಟಿಯಿಂದ hard nut to crack ಎನಿಸಿದ್ದ ತಮಿಳುನಾಡು ಪ್ರಾಂತ ಪ್ರಚಾರಕರಾಗಿ 1970 ರಿಂದ 1984ರ ವರೆಗೆ ಕಾರ್ಯನಿರ್ವಹಣೆ. 1984 ರಿಂದ 1990ರ ವರೆಗೆ ದಕ್ಷಿಣ ಕ್ಷೇತ್ರ ಪ್ರಚಾರಕ. 1990 ರಿಂದ 2000ದ ವರೆಗೆ ಸಂಘದ ಅಖಿಲ ಭಾರತೀಯ ಸೇವಾ ಪ್ರಮುಖ್(ಮೊತ್ತ ಮೊದಲ ಸೇವಾ ಪ್ರಮುಖರು.). ಈ ಸಮಯದಲ್ಲಿ ಅಮೆರಿಕ, ಟ್ರಿನಿಡಾಡ್, ಕೆನಡಾ, ಇಂಗ್ಲೆಂಡ್, ಜರ್ಮನಿ, ಹಾಲೆಂಡ್, ನಾರ್ವೆ, ಪೂರ್ವ ಆಫ್ರಿಕಾ, ಮಲೇಷಿಯಾ, ಸಿಂಗಪೂರ್ ಮುಂತಾದ ದೇಶಗಳಲ್ಲಿ ನಡೆದಿರುವ ಹಿಂದು ಚಟುವಟಿಕೆಗಳನ್ನು ಗಮನಿಸಲು ಅಲ್ಲಿಗೆ ಪ್ರವಾಸ. ಅನಂತರ ಅ.ಭಾ. ಕಾರ್ಯಕಾರಿಣಿ ಸದಸ್ಯ – ಹೀಗೆ ಸೂರೂಜೀ ನಿರ್ವಹಿಸಿದ ಗುರುತರ ಹೊಣೆಗಾರಿಕೆಗಳು ಹತ್ತು ಹಲವು.

ತಮಿಳುನಾಡಿನಲ್ಲಿ ಸಂಘಕಾರ್ಯ ಏನೇ ಆದರೂ ಬೆಳೆಯದು ಎಂಬ ನಿರಾಶೆ ಸಂಘದ ಕಾರ್ಯಕರ್ತರಲ್ಲಿ ಮನೆಮಾಡಿದ್ದಾಗ ಸೂರೂಜಿ ಅದನ್ನು ಹುಸಿಗೊಳಿಸಿದರು. ತಮಿಳುನಾಡಿನಾದ್ಯಂತ ಸಂಚರಿಸಿ, ಅಲ್ಲಿನ ವಿವಿಧ ಜಾತಿ, ಮತಗಳಿಗೆ ಸೇರಿದ ಗಣ್ಯರನ್ನು ಸಂಪರ್ಕಿಸಿ ದೇಶಕ್ಕೆ ಸಂಘದ ಅಗತ್ಯವನ್ನು ಮನವರಿಕೆ ಮಾಡಿಕೊಟ್ಟರು. ತಮಿಳಿನಲ್ಲೇ ಬೌದ್ಧಿಕ್, ಭಾಷಣ ಮಾಡುವಷ್ಟು ನಿಷ್ಣಾತರಾಗಿದ್ದರು ಅವರು. ಕೊನೆಯವರೆಗೂ ಚೆನ್ನೈನ 'ಶಕ್ತಿ' ಸಂಘ ಕಾರ್ಯಾಲಯವೇ ಅವರ ಕಾಯಂ ವಾಸ. ತಮಿಳುನಾಡಿನ ಸ್ವಯಂಸೇವಕರೊಂದಿಗೆ ತಮಿಳಿನಲ್ಲೇ ಮಾತುಕತೆ.

ಸಂಘದ ದ್ವಿತೀಯ ಸರಸಂಘಚಾಲಕ ಶ್ರೀ ಗುರೂಜಿಯವರ ಜೊತೆಗೆ 31 ವರ್ಷಗಳಷ್ಟು ದೀರ್ಘಕಾಲ ಕಾರ್ಯ ನಿರ್ವಹಿಸಿದ ಸೌಭಾಗ್ಯ ಸೂರೂಜಿ ಅವರದು. ಗುರೂಜಿಯವರು ಕರ್ನಾಟಕಕ್ಕೆ ಬಂದಾಗಲೆಲ್ಲ ಅವರ ಜೊತೆಗೆ ಸಾಥ್ ನೀಡುತ್ತಿದ್ದವರಲ್ಲಿ ಸೂರೂಜಿ ಪ್ರಮುಖರು. ಗುರೂಜಿಯವರನ್ನು ಅತ್ಯಂತ ಸಮೀಪದಿಂದ ಹಲವಾರು ಬಾರಿ ಕಂಡು, ಅವರೊಡನೆ ಆತ್ಮೀಯವಾಗಿ ಚರ್ಚಿಸುವಷ್ಟು ಸಲುಗೆ ಸೂರು ಅವರಿಗಿತ್ತು. ಶ್ರೀ ಗುರೂಜಿ ಅವರ ಕುರಿತು ಸೂರೂಜಿ 368 ಪುಟಗಳ Shri Guruji Reminiscences ಎಂಬ ದೊಡ್ಡ ಗ್ರಂಥವನ್ನೇ ಇಂಗ್ಲಿಷ್‌ನಲ್ಲಿ ಬರೆದಿದ್ದಾರೆ.

**ಓದುಗರೇ ಗಮನಿಸಿ**
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-04. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19.